5) ಬೆಂಗ್ರೆ ಪ್ರದೇಶದ 12 ಸಾವಿರದ ಜನರನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಲು ಒತ್ತಾಯ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಉಪಾಧ್ಯಕ್ಷಣಿಯವರೆ, ಮಂಗಳೂರು ಸಮೀಪದ ಬೆಂಗ್ರೆ ಪ್ರದೇಶದಲ್ಲಿ ಸುಮಾರು 12 ಸಾವಿರದಷ್ಟು ಜನರಿದ್ದಾರೆ. ಆದರೆ ಈವರೆಗೂ ಈ ಪ್ರದೇಶ ಮಂಡಲ ಪಂಚಾಯತಿ ಅಥವಾ ಜಿಲ್ಲಾ ಪರಿಷತ್ತಿಗೆ ಸೇರಿಲ್ಲ, ಮಂಗಳೂರು ಮಹಾನಗರ ಪಾಲಿಕೆಗೂ ಸೇರಿಲ್ಲ. ಈ ಕುರಿತು ಕಳೆದ ಒಂದೆರಡು ವರ್ಷಗಳಿಂದ ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಬೇಕೆಂದು ನಾನು ಕೇಳುತ್ತಲೇ ಬಂದಿರುತ್ತೇನೆ. ಈ ಬಗ್ಗೆ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಆ ಭಾಗದ ಜನರಿಗೆ ಅಭಿವೃದ್ಧಿ ಕೆಲಸಗಳಿಲ್ಲ, ಶಾಲಾ ಮತ್ತಿತರ ವ್ಯವಸ್ಥೆಗಳಿಲ್ಲ. ಆದಕಾರಣ ಬೆಂಗ್ರೆ ಪ್ರದೇಶವನ್ನು ಅತೀ ಜರೂರಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಬೇಕಾಗಿ ಬಯಸುತ್ತೇನೆ. ಈ ಕುರಿತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಈ ವಿಷಯ ಸಲಹೆ ರೂಪದಲ್ಲಿ ಬಂದಿದೆ.ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲಿಸಿ ನಿರ್ಣಯ ತೆಗೆದುಕೊಳ್ಳುತ್ತದೆ.

6) Enhancement of processing charges by the poly there Industries engaged by K.S.F.C.

SRI T.B. JAYACHANDR (KALLAMBELLA) : The Karnataka state Forest Industries Corporation Ltd., Bangalore, has engaged about 21 captive Units all over the state for manufacturing polythene bags on labour charge basis.

The previous revision of processing charges was done in 1987 bringing t to Rs. 3.50 per Kg. Following were the rates of different services that he manufacturer has to utilise in 1987.

1) Electricity - Rs. 0.70 per unit.

2) Transportation - Rs. 0.15 per kg.

3) Wages for skilled operator - Rs.1000/- per month

4) Wages for labourers - Rs.10/- per day.

5) Bank Guarantee Commission - 1.5%.

Now, even after lapse of 5 years the Processing Charges remain the ame, although the rates of all the above services have increased as ollows.

1) Electricity-Rs 1.4 per unit inclusive of Min.charges.

2) Transportation - 0.45 per kg.

3) Wages for Skilled Operator - Rs.2500/- per month.

4) Wages for Labourers - Rs.25/- per day.

5) Bank Guarantee Commission - 2.5%

6) Cost of Maintenance- has increased three times.

Inspite of repeated requests, by the units, the processing charges have not been increased and this has led to the sickness among the units. Some of the Units are not in a position to repay the Term Loan from K.S.F.C. Since all these units are manufacturing Polythene Bags for Karnataka State Forest Industries corporation only, they have not come in contact with the general consumar market and hence the units are finding it difficult to make both ends meet.

Hence, it is requested that the processing Charges be increased taking all the factors into account so that the units can run with reasonable profits, thereby reducing the unemployment.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಣಿಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

1) ಪಾಲಿಥೀನ್ ಚೀಲಗಳ ತಯಾರಿಕೆಗೆ 1983-84ರ ಸಾಲಿನಲ್ಲಿ ಪರಿಗಣಿಸಿದ ಘಟಕಗಳಿಗೆ (ಕಂಡಕ್ಟೀವ್ ಯುನಿಟ್ಸ್) ವಹಿಸಲಾಯಿತು

2) ಇಲ್ಲಿಯವರೆಗೆ ಕಂಪನಿಯಲ್ಲಿ 22 ಘಟಕಗಳನ್ನು ನೊಂದಾಯಿಸಿಕೊಳ್ಳಲಾಗಿದೆ.

3) ದರ ಪರಿಷ್ಕರಣೆಯನ್ನು 1984 ರಿಂದ ಈಚೆಗೆ, ಕೆ.ಜಿ. 1 ಕ್ಕೆ ರೂ.2.75 ರಿಂದ ರೂ.3.75 ಕ್ಕೆ ಎರಡು ಸಾರಿ ಪರಿಷ್ಕರಿಸಲಾಗಿದೆ.

4) ಈ ಘಟಕಗಳ ಮುಖಾಂತರ 1990-91ನೇ ಸಾಲಿನಲ್ಲಿ 349 ಮೆಟ್ರಿಕ್ ಟನ್‌ಗಳು, 1991-92ರಲ್ಲಿ 349 ಮೆಟ್ರಿಕ್ ಟನ್ನ್‌ಗಳು ಮತ್ತು 1992-93ರಲ್ಲಿ 176 ಮೆಟ್ರಿಕ್ ಟನ್‌ಗಳಷ್ಟು ಪಾಲಿಥೀನ್ ಚೀಲಗಳನ್ನು ತಯಾರಿಸಲಾಗಿದೆ. 1991-92ರಲ್ಲಿ ಅರಣ್ಯ ಇಲಾಖೆಯ ಪಾಲಿಥೀನ್ ಚೀಲಗಳ ಬೇಡಿಕೆಯ ಶೇಕಡ 25ರಷ್ಟನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ಸಂಸ್ಥೆಗೆ ವಹಿಸಲಾಯಿತು.

5) ದಿನಾಂಕ 28-9-1987 ರಿಂದ ಅನುವಹಿಸುವಂತೆ ಪಾಲಿಥೀನ್ ಸಂಸ್ಕರಣ ವೆಚ್ಚವನ್ನು ದೊಡ್ಡ ಅಳತೆಯ ಚೀಲಗಳಿಗೆ ಕೆ.ಜಿ. 1ಕ್ಕೆ ರೂ.3-50 ರಂತೆಯೂ ಮತ್ತು ಸಣ್ಣ ಅಳತೆಯ ಚೀಲಗಳಿಗೆ ಕೆ.ಜಿ. 1 ಕ್ಕೆ ರೂ.3-75ರಂತೆಯೂ ಪರಿಷ್ಕರಿಸಲಾಯಿತು.

6) ದರ ಪರಿಷ್ಕರಣ ಮಾಡುವಾಗ ವಿದ್ಯುತ್‌ಚ್ಛಕ್ತಿ, ಕುಶಲ ಹಾಗೂ ಅರಕುಶಲಗಾರರ ಸಂಬಳ ಮತ್ತು ದಿನಗೂಲಿ, ದುರಸ್ಥಿಗಳು ಮತ್ತು ನಿರ್ವಹಣೆಯ ವೆಚ್ಚಗಳು, ದೂರವಾಣಿ, ಮುದ್ರಣ, ಅಂಚೆ, ಕಚ್ಚಾವಸ್ತುಗಳು ಮಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

7) ಸಂಸ್ಕರಣ ವೆಚ್ಚವನ್ನು ಪ್ರತ್ಯೇಕವಾಗಿ ಪರಿಷ್ಕರಿಸಲು ಬರುವುದಿಲ್ಲ. ಕಂಪನಿಯ ಪಾಲಿಥೀನ್ ಚೀಲಗಳ ಮಾರುವ ಬೆಲೆಯು ದುಭಾರಿಯಾಗಿರುವುದಿಲ್ಲ. ಇದು ಹೊರಗಿನ ಮಾರುಕಟ್ಟೆಯ ದರದಂತೆ ಹೆಚ್ಚು ಅಥವಾ ಕಡಿಮೆ ಇರಬೇಕಾಗುತ್ತದೆ. ಆದ್ದರಿಂದ ಕಂಪನಿಯ ತಯಾರಿಕಾ ಘಟಕಗಳ ಸಂಸ್ಕರಣ ದರಗಳು ಅದರ

ಮಾರಾಟ ಬೆಲೆಗೆ ಅನುಗುಣವಾಗಿ ಇರಬೇಕಾಗಿರುತ್ತದೆ. ಇಲ್ಲದಿದ್ದರೆ ಕಂಪನಿಯು ನಷ್ಟವನ್ನು ಅನುಭವಿಸಬೇಕಾಗುತ್ತದೆ ಅಥವಾ ಮಾರುಕಟ್ಟೆ ಬೆಲೆಗಳಿಗೆ ತಾಳಿಕೊಳ್ಳುವ ರೀತಿಯಲ್ಲಿ ಮಾರಾಟದ ಬೆಲೆಯನ್ನು ಹೆಚ್ಚಿಸಬೇಕಾಗುತ್ತದೆ. ಸಂಸ್ಥೆಯು ಶೇಕಡ 3ರಷ್ಟು ಅತ್ಯಲ್ಪ ಲಾಭಾಂಶವನ್ನು ಹೊಂದಿರುವುದರಿಂದ ಸಂಸ್ಕರಣ ವೆಚ್ಚದಲ್ಲಿ ಯಾವುದೇ ಏರಿಕೆಯನ್ನು ಹೇರಿದರೂ ಕಂಪನಿಯು ನಷ್ಟಕ್ಕೆ ಒಳಗಾಗುವುದು.

8) ಪರಿಗಣಿಸಿದ ಘಟಕಗಳು ಕಂಪನಿ ಜೊತೆಗೆ ಬದ್ದವಾಗಿರಬೇಕೆಂಬ ಬಲತ್ಕಾರ ಇರುವುದಿಲ್ಲ. ಅವುಗಳು ಬಾಹ್ಯಮಾರುಕಟ್ಟೆಯಲ್ಲಿ ಸ್ವಾತಂತ್ರವಾಗಿ ಸೇರಲು ಸಂಸ್ಥೆಯು ಅವುಗಳನ್ನು ಬಿಟ್ಟುಕೊಡಲು ತಯಾರಾಗಿದೆ. ಸಂಸ್ಥೆಯ ಚಾಲ್ತಿ, ಸಂಸ್ಕರಣ ವೆಚ್ಚಗಳಿಗೆ ಒಪ್ಪಿಕೊಂಡು ಹಲವು ಇತರ ತಯಾರಿಕಾ ಘಟಕಗಳಲ್ಲಿ ತಮ್ಮನ್ನು ಪರಿಗಣಿಸಬೇಕೆಂದು ಬಹಳಷ್ಟು ಬೇಡಿಕೆಗಳು ಬರುತ್ತವೆ.

9) ಕಳೆದ 5ವರ್ಷಗಳಿಂದ 22ಪರಿಗಣಿಸಿದ ಘಟಕಗಳಿಂದ ದರಗಳನ್ನು ಪರಿಷ್ಕರಿಸಬೇಕೆಂಬ ಲಿಖಿತ ಬೇಡಿಕೆ ಯಾವ ಘಟಕದಿಂದಲೂ ಬಂದಿರುವುದಿಲ್ಲ.

10) ಹಾಗೂದರೂ ಮಾರುಕಟ್ಟೆ ದರಗಳು ಮತ್ತು ಸಂಸ್ಥೆಯ ಲಾಭಕ್ಕೆ ಸಂಬಂಧಿಸಿದಂತೆ ಸಂಸ್ಕರಣ ವೆಚ್ಚವನ್ನು ಕೋರಿಕೆಗೆ ಅನುಗುಣವಾಗಿ ಹೆಚ್ಚಿಸಲಾಗುವುದು.

11) ಚಾಲ್ತಿ ತಯಾರಿಕಾ ವೆಚ್ಚ ಕೆ.ಜಿ. 1ಕ್ಕೆ ರೂ. 59.18 ಇದ್ದರೂ ಮಾರಾಟ ದರ ಕೆ.ಜಿ.1ಕ್ಕೆ ರೂ. 62-25 ಇರುತ್ತದೆ.

ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಯ ಈಡೇರಿಕೆ.

ಶ್ರೀ ಬಸವರಾಜ ಪಾಟೀಲ್ ಆಟ್ಟೂರ್ : ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಧರ್ಮಸಿಂಗ್ : (ಸಮಾಜ ಕಲ್ಯಾಣ ಮಂತ್ರಿಗಳು) : ಮಾನ್ಯ ಅಧ್ಯಕ್ಷಣೆಯವರೇ, ಈ ವಿಚಾರವಾಗಿ ಈ ಕೆಳಕಂಡ ಹೇಳಿಕೆ ನೀಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಸಮಗ್ರ ಬಾಲ ವಿಕಾಸ ಯೋಜನೆ (ಐ.ಸಿ.ಡಿ.ಎಸ್) ಕಾರ್ಯಕ್ರಮವು ಕೇಂದ್ರ ಸರ್ಕಾರದ ನಿಯಾಮಾವಳಿಗಳಂತೆ ಅನಷ್ಠಾನಗೊಳ್ಳುತ್ತಲಿದೆ. ಈ ಯೋಜನೆಯಡಿ ಒಟ್ಟು ೧೪೨ ಪ್ರಾಜೆಕ್ಟ್‌ಗಳಿದ್ದು, ಇವುಗಳಲ್ಲಿ ೧೧೨ ಕೇಂದ್ರ ಸರ್ಕಾರದ ವೆಚ್ಚದಿಂದಲೂ ಮತ್ತು ಉಳಿದ ೩೦ ರಾಜ್ಯ ಸರ್ಕಾರದ ವೆಚ್ಚದಿಂದಲೂ ನಡೆಯುತ್ತಿವೆ. ಈ ಯೋಜನೆಯಡಿ ೨೩,೭೬೩ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗೌರವ ಧನ ಮಾತ್ರ ಪಡೆಯುವ ಕಾರ್ಯಕರ್ತೆಯರಾಗಿದ್ದು, ಗೌರವ ಧನದ ಆಧಾರದ ಮೇಲೆಯೇ ಕೆಲಸ ನಿರ್ವಹಿಸುತ್ತಿದ್ದಾರೆ. ಇವರ ಎಲ್ಲಾ ಸೇವಾ ನಿಯಮಗಳೂ ಕೇಂದ್ರ ಸರ್ಕಾರದಿಂದಲೇ ನಿರೂಪಿಸಲ್ಪಟ್ಟಿವೆ. ಇವರಿಗೆ ಈಗ ಸಂದಾಯವಾಗುತ್ತಿರುವ ಗೌರವ ಧನದ ವಿವರ, ಇವರ ವಿದ್ಯಾರ್ಹತೆ ಮತ್ತು ಸೇವೆ ಸಲ್ಲಿಸಿದ ಅವಧಿ ಇವುಗಳನ್ನು ಆಧಾರವಾಗಿಟ್ಟುಕೊಂಡು ಕನಿಷ್ಟ ಮಾಹೆಯಾನ ರೂ.225 ರಿಂದ ರೂ.325ವರೆಗೆ ಕೊಡಲಾಗುತ್ತಿದೆ. ಸಹಾಯಕಿಯರಿಗೆ ಮಾಹೆಯಾನ ಗೊತ್ತಾದ ಸಂಭಾವನೆ 110 ರೂ. ಎಂದು ನಿಗಧಿಯಾಗಿದೆ. ಈ ಎಲ್ಲಾ ಸೇವಾ ನಿಯಮಗಳೂ ಕೇಂದ್ರ ಸರ್ಕಾರದಿಂದಲೇ ನಿರೂಪಿಸಲ್ಪಟ್ಟಿವೆ.